ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

### ಪೌರತ್ವ ಕಾಯಿದೆ ಜಾರಿ ಕುರಿತು ಜವಾಹರಲಾಲ್ ನೆಹರು ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಆರೋಪ

# ಪ್ರಧಾನಿಯಾಸೆಗೆ ಅಂದು ಭಾರತ ಇಬ್ಭಾ...

**ದೆಹಲಿ:** ವಿವಾದಾತ್ಮಕ ಪೌರತ್ವ ಕಾನೂನಿಗೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ ಮಾಡಿದ್ದಾರೆ ಎಂಬ ಆರೋಪವನ್ನು ಖಂಡಿಸಿದ ಪ್ರಧಾನಿ ನರೇಂದ್ರ ಮೋದಿ, ಗುರುವಾರ ಕಾಂಗ್ರೆಸ್ ಮೇಲೆ ವಾಗ್ದಾಳಿ ನಡೆಸಿದ್ದಾರೆ. ಜವಾಹರಲಾಲ್ ನೆಹರು ಅವರ ವಿಭಜನೆ, 1975ರ ತುರ್ತು ಮತ್ತು 1984ರ ಸಿಖ್ ವಿರೋಧಿ ಗಲಭೆಗಳ ಬಗ್ಗೆ ಉಲ್ಲೇಖಿಸಿದ್ದಾರೆ.

ಕಾಂಗ್ರೆಸ್ ಮತ್ತು ಎಡಪಂಥೀಯರು ಪ್ರತಿಭಟನೆಯನ್ನು ಪ್ರಚೋದಿಸುತ್ತಿದ್ದಾರೆ ಎಂದು ಆರೋಪಿಸಿದ ಪ್ರಧಾನಿ ಮೋದಿ, ಪೌರತ್ವ ಕಾಯಿದೆಯು ಯಾವುದೇ ಭಾರತೀಯ ನಾಗರಿಕರ ಮೇಲೆ ಪರಿಣಾಮ ಬೀರುವುದಿಲ್ಲ ಅಥವಾ ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ಹಾನಿಯಾಗುವುದಿಲ್ಲ ಎಂದು ಪ್ರತಿಪಾದಿಸಿದರು.

ರಾಷ್ಟ್ರಪತಿ ಭಾಷಣದ ವಂದನಾರ್ಪಣೆ ವೇಳೆ ಮಾತನಾಡಿದ ಪ್ರಧಾನಿ, ದೇಶದ ಸ್ಥಾಪಕ ಪಿತಾಮಹರ ಇಚ್ಛೆಯಂತೆ ನಮ್ಮ ಸರಕಾರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವಾಗ ಕಾಂಗ್ರೆಸ್ ಸಮಸ್ಯೆಗಳನ್ನು ಎದುರಿಸುತ್ತಿದೆ. ವಿಭಜನೆಯ ನಂತರ ಪಾಕಿಸ್ತಾನದ ಅಲ್ಪಸಂಖ್ಯಾತರ ಬಗ್ಗೆ ಜವಾಹರಲಾಲ್ ನೆಹರು ಅವರ ನೀತಿಗಳ ವಿವರವನ್ನು ಮುಂದುವರಿಸಿದ ಪ್ರಧಾನಿ, ಭಾರತದ ಪ್ರಧಾನಿಯಾಗಬೇಕೆಂಬ ಆಕಾಂಕ್ಷೆಯಿಂದ ನಕ್ಷೆಯಲ್ಲಿ ರೇಖೆಯನ್ನು ರಚಿಸಿ, ಭಾರತವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ವಿಭಜನೆಯ ನಂತರ, ಹಿಂದೂಗಳು, ಸಿಖ್ಖರು ಮತ್ತು ಇತರ ಅಲ್ಪಸಂಖ್ಯಾತರನ್ನು ಹೇಗೆ ಹಿಂಸಿಸಲಾಯಿತು ಎಂಬುದನ್ನು ಊಹಿಸಲಾಗದು ಎಂದು ಪಿಎಂ ಮೋದಿ ಉತ್ತರಿಸಿದರು.



1950ರಲ್ಲಿ, ನೆಹರು-ಲಿಯಾಕತ್ ಅಲಿ ಒಪ್ಪಂದಕ್ಕೆ ಸಹಿ ಹಾಕಿದಾಗ, ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ವಿರುದ್ಧ ತಾರತಮ್ಯ ಮಾಡಲಾಗುವುದಿಲ್ಲ ಎಂದು ಅದು ಹೇಳಿದೆ. ನೆಹರು ಅವರಂತಹ ದೊಡ್ಡ, ಜಾತ್ಯತೀತ ವ್ಯಕ್ತಿ, ದೂರದೃಷ್ಟಿಕೋನ ಉಳ್ಳವರು, ಎಲ್ಲ ನಾಗರಿಕರನ್ನು ಹಾಗೂ ಅಲ್ಪಸಂಖ್ಯಾತರನ್ನು ಏಕೆ ಪರಿಗಣಿಸಲಿಲ್ಲ? ಅದಕ್ಕೆ ಕೆಲವು ಕಾರಣಗಳಿರಬೇಕು ಎಂದು ಅವರು ಕಾಂಗ್ರೆಸ್ ಅನ್ನು ಕೆಣಕಿದರು.

ವಿಭಜನೆಯ ನಂತರ ಉಭಯ ದೇಶಗಳ ನಡುವೆ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಜನರ ದೊಡ್ಡ ಪ್ರಮಾಣದ ವಲಸೆಯ ಹಿನ್ನೆಲೆಯಲ್ಲಿ, ನೆಹರು ಮತ್ತು ಪಾಕಿಸ್ತಾನ ಪ್ರಧಾನಿ ಲಿಯಾಕತ್ ಅಲಿ ನಡುವಿನ ಒಪ್ಪಂದಕ್ಕೆ ಸಹಿ ಹಾಕಲಾಯಿತು.

## ಕಾಂಗ್ರೆಸ್ ಹೆಜ್ಜೆ ಅನುಸರಿಸಿದ್ದರೆ ವಿವಾದ ಬಗೆಹರಿಯುತ್ತಿರಲಿಲ್ಲ

ಎನ್‌ಡಿಎ ಸರಕಾರವು ಶೀಘ್ರಗತಿಯಲ್ಲಿ ಮುಂದೆ ಸಾಗುವ ಉದ್ದೇಶವನ್ನು ಹೊಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದು, ಕಾಂಗ್ರೆಸ್‌ನ ಹೆಜ್ಜೆಗಳನ್ನು ಅನುಸರಿಸಿದ್ದರೆ, 134 ವರ್ಷಗಳ ಹಳೆಯ ಅಯೋಧ್ಯೆ ರಾಮಜನ್ಮ ಭೂಮಿ ವಿವಾದ ಬಗೆಹರಿಯುತ್ತಿರಲಿಲ್ಲ ಎಂದಿದ್ದಾರೆ. ಲೋಕಸಭೆಯಲ್ಲಿ ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುತ್ತಾ, ನಾವು ನಿಮ್ಮಂತೆಯೇ ಕೆಲಸ ಮಾಡಿದ್ದರೆ ಜನ್ಮಭೂಮಿ ವಿವಾದ ಹಾಗೇ ಉಳಿಯುತ್ತಿತ್ತು (ಅಗರ್ ಹಮ್ ಆಪ್ ಕಿ ತರಾ ಚಲ್ತೆ, ತೋಹ್ ರಾಮ್ ಜನ್ಮ ಭೂಮಿ ಅಭಿ ಭಿ ವಿವಾದಿತ್ ಸ್ಥಲ್ ರಹತಾ). ಇದಲ್ಲದೆ, ಭಾರತವು ಶತ್ರುಗಳ ಆಸ್ತಿಯ ವಿರುದ್ಧ ಕಾನೂನಿಗಾಗಿ ಕಾಯಬೇಕಾಗಿಲ್ಲ ಎಂದರು. ಯಾವ ಕೆಲಸಕ್ಕೆ ಎಷ್ಟು ಆದ್ಯತೆ ನೀಡಬೇಕು, ಎಷ್ಟು ವೇಗದಿಂದ ಮುಂದುವರಿಯಬೇಕು ಎಂದು ಅರಿತ ಕಾರಣದಿಂದಲೇ ಎನ್‌ಡಿಎಗೆ ಮತ್ತೊಂದು ಅವಕಾಶ ನೀಡಿದೆ ಎಂದರು.

## ನಿರುದ್ಯೋಗದ ಬಗ್ಗೆ ಮೌನ...

**ದೆಹಲಿ:** ನೆಹರು, ಪಾಕಿಸ್ತಾನದ ಬಗ್ಗೆ ಪ್ರಧಾನಿ ಮೋದಿ ಮಾತನಾಡುತ್ತಾರೆ. ಆದರೆ ಮುಖ್ಯ...



...ವಾಗಿರುವ ನಿರುದ್ಯೋಗದ ... ಧಾನಿ ಮೋದಿ ಮಾತೇ ಆ... ಎಂದು ರಾಹುಲ್ ಗಾಂಧಿ ಟೀ... ರಾಷ್ಟ್ರಪತಿಗಳ ಭಾಷಣಕ್ಕೆ ... ನಿರ್ಣಯದ ಮೇಲಿನ ಚರ್ಚೆ... ಮಾತನಾಡಿದ ಪ್ರಧಾನಿ ಮೋದಿ ಮಹಾತ್ಮ ಗಾಂಧಿ ನಿಮಗೆ ಟ್ರೇಲರ್ ಆಗಿರ... ನಮಗೆ ಜೀವನ ಎಂದಿದ್ದರು.

ಮೋದಿ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ... ಗಾಂಧಿ, ದೇಶದ ಮುಂದಿರುವ ಅತಿ ದೊಡ್ಡ ವಿಷ... ಆರ್ಥಿಕತೆ ಹಾಗೂ ನಿರುದ್ಯೋಗ. ಆದರೆ ಪ್ರಧಾನಿ ... ಮಾತೇ ಆಡಲಿಲ್ಲ ಎಂದು ರಾಹುಲ್ ಗಾಂ... ಮಾಡಿದ್ದಾರೆ.

## 19 ಜನವರಿ, 1990ರ ರಾತ್ರಿ ಕಾಶ್ಮೀರದ ಗುರುತು ಸ...

ಜಮ್ಮು ಮತ್ತು ಕಾಶ್ಮೀರದ ಗುರುತನ್ನು ಜನವರಿ 19, 1990ರಂದು ಸಮಾಧಿ ಮಾಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸಂಸತ್ತಿನಲ್ಲಿ ಹೇಳಿದ್ದಾರೆ. 370ನೇ ವಿಧಿ ಅನ್ವಯ ರಾಜ್ಯಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂತೆಗೆದುಕೊಂಡ ತಮ್ಮ ಸರಕಾರದ ಕ್ರಮವನ್ನು ಟೀಕಿಸಿದರು. ಕಾಶ್ಮೀರ ಭಾರತದ ಕಿರೀಟ. ಕಾಶ್ಮೀರದ ಗುರುತನ್ನು ಬಾಂಬ್ ಮತ್ತು ಭಯೋತ್ಪಾದನೆಗೆ ಇಳಿಸಲಾಯಿತು. 1990ರ ಜನವರಿಯಲ್ಲಿ ಆ ಕಪ್ಪು ರಾತ್ರಿಯಂದು(ಬ್ಲ್ಯಾಕ್ ನೈಟ್) ಕೆಲವರು ಕಾಶ್ಮೀರದ ಗುರುತನ್ನು ಸಮಾಧಿ ಮಾಡಿದರು. 370 ಹಿಂತೆಗೆದುಕೊಳ್ಳುವುದರಿಂದ ಕಾಶ್ಮೀರ ಹೊತ್ತಿ ಉರಿಯಲಿದೆ ಎಂದು ಕೆಲವರು ಹೇಳಿದರು. ಆದರೆ, ಅದು ಸಂವಿಧಾ... ...ರ್ಣತವಾಗಿದೆ. ಈ ಸದನವು ಸಂವಿಧಾನವನ್ನು ... ಎಂದು ಪ್ರಧಾನಿ ಹೇಳಿದರು. ಕಳೆದ ವರ್ಷ ಆಗಸ್ಟ್‌ನ... ವಿಧಿ ಕುರಿತು ಕೇಂದ್ರ ತೆಗೆದುಕೊಂಡ ... ಪ್ರತಿಪಕ್ಷಗಳಿಂದ ಭಾರಿ ಪ್ರತಿಭಟನೆಗೆ ನಾಂದಿ... ಮೂರು ದಶಕಗಳ ಹಿಂದೆ ಕಾಶ್ಮೀರ ಕಣಿವೆಯ... ಹಿಂಸಾಚಾರ ಹಾಗೂ ಉದ್ವಿಗ್ನತೆಯಿಂದ ಬೇಸತ್ತು ಕಾಶ್ಮೀರಿ ಪಂಡಿತರು ಪಲಾಯನ ಮಾಡಿದರು. ಜ... 19 ಅನ್ನು 'ಎಕ್ಸೋಡಸ್ ಡೇ' (ಸಾಮೂಹಿಕ ನಿರ್ಗ... ಎಂದು ನೆನಪಿಸಿಕೊಳ್ಳಲಾಗುತ್ತದೆ.